6

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಮಾಹಿತಿ**

**ದಿನಾಂಕ:09.08.2025 ರಂದು "ನಂದಗಡ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಅವ್ಯವಹಾರ" ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. "ಖಾನಾಪುರ ತಾಲ್ಲೂಕಿನ ನಂದಗಡ ಗ್ರಾಮದಲ್ಲಿರುವ ಟಿಎಪಿಎಂಸಿ (ಮಾರ್ಕೆಟಿಂಗ್) ಸೊಸೈಟಿಯಲ್ಲಿ ಕೋಟ್ಯಾಂತರ ರೂ. ಹಗರಣ ನಡೆದಿದೆ ಎಂಬ ಸದ್ದು ತಾಲ್ಲೂಕಿನಲ್ಲಿ ಅತ್ಯಂತ ಸಂಚಲನ ಮೂಡಿಸಿದೆ. ಸಂಘದಲ್ಲಿರುವ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು ಸೇರಿಕೊಂಡು 2023-24ನೇ ಸಾಲಿನಲ್ಲಿ 84 ಲಕ್ಷ ಮುಂಗಡ ಹಣ ರೂಪದಲ್ಲಿ ನಿರ್ದೇಶಕರ ಮಂಡಳಿಯು ಕೋಟ್ಯಾಂತರ ರೂಪಾಯಿಗಳ ಆರ್ಥಿಕ ಭ್ರಷ್ಟಾಚಾರವನ್ನು ಮಾಡಿದೆ ಎಂದು ಲೆಕ್ಕಪರಿಶೋಧನಾ ವರದಿ ಸ್ಪಷ್ಟಪಡಿಸಿದೆ. ಇದು 2019 ರಿಂದ ಸಂಘದಲ್ಲಿ ಮುಂಗಡ ಹಣ ನಿರ್ದೇಶಕರು ಪಡೆಯುತ್ತಿದ್ದು, ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಸಮಗ್ರವಾಗಿ ಮಾಹಿತಿಯೊಂದಿಗೆ ಕಂಡುಬರುತ್ತದೆ. ಹೀಗಾಗಿ ಈ ಹಣಕಾಸು ವಂಚನೆಯ ಬಗ್ಗೆ ಸಮಗ್ರ ತನಿಖೆ ನಡೆಸಿ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು.**

**ಕಳೆದ ಕೆಲವು ವರ್ಷಗಳಿಂದ ಆಡಿಟ್ ವರದಿಯಲ್ಲಿ ದೋಷಗಳನ್ನು ದಾಖಲಿಸಲಾಗಿದೆ. ಆದಾಗ್ಯೂ, ಸಂಬಂಧಪಟ್ಟ ಇಲಾಖೆ ಇದನ್ನು ಗಣನೆಗೆ ತೆಗೆದುಕೊಂಡಿಲ್ಲ. ಆದ್ದರಿಂದ ನಿರ್ದೇಶಕರ ಮಂಡಳಿಯು ಸಡಿಲವಾಗಿದೆ. ಸೊಸೈಟಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಸಂಪೂರ್ಣ ತನಿಖೆ ನಡೆಯಬೇಕು" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಕುರಿತು ಇಲಾಖೆಯ ಗಮನಕ್ಕೆ ಬಂದಿದೆಯೇ? ಇದ್ದಲ್ಲಿ ಈ ಬಗ್ಗೆ ಇಲಾಖೆಯ ವತಿಯಿಂದ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡಲು ಮತ್ತು ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಸಹಕಾರ ಇಲಾಖೆ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ**

## ಉತ್ತರ:

ದಿನಾಂಕ:09.08.2025 ರಂದು "ನಂದಗಡ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಅವ್ಯವಹಾರ" ಎಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಸಂಘದ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಲಾಗಿ ಕಂಡಿಕೆ 28ರಲ್ಲಿ **ಇತರೆ ಬರತಕ್ಕುವುಗಳು**:ಶಿರೋನಾಮೆಯಲ್ಲಿ ವಿವಿಧ ಉದ್ದೇಶಗಳಿಗೆ ಕೊಡಮಾಡಿದ ಮುಂಗಡವೆಂದು **ರೂ.172.61 ಲಕ್ಷದಷ್ಟು** ವರದಿಯಾಗಿರುತ್ತದೆ.

ಈ ಪೈಕಿ **ರೂ.84 ಲಕ್ಷ** ಮುಂಗಡ ಹಣ ಸಂಘದ 59 ಸಿಬ್ಬಂದಿಗಳು, ನಾಲ್ಕು ಮಾಜಿ ನಿರ್ದೇಶಕರು, ಒಬ್ಬರು ಹಾಲಿ ನಿರ್ದೇಶಕರು ಹಾಗೂ ಇತರೆ ವ್ಯವಹಾರಗಳಿಗೆ ಸಂಬಂಧ ಪಟ್ಟವರಿಗೆ ಮುಂಗಡವನ್ನು ನೀಡಲಾಗಿರುತ್ತದೆ. ಪಟ್ಟಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.

2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡಿಕೆ 28ರಲ್ಲಿ **ಇತರೆ ಬರತಕ್ಕವುಗಳು ಉಪ ಕಂಡಿಕೆ-1 ರಲ್ಲಿ** ಈ ಹಿಂದಿನ ವರ್ಷದ ವರದಿಯ ಅನ್ವಯ, ಸಂಘವು ಕೆಲವು ನಿರ್ದೇಶಕರಿಗೆ, ಮಾಜಿ ಅಧ್ಯಕ್ಷರಿಗೆ, ಸಿಬ್ಬಂದಿಗೆ ಹಾಗೂ ಇತರೇ ವ್ಯಕ್ತಿಗಳಿಗೆ 2019ನೇ ಸಾಲಿನಿಂದ ವೈಯಕ್ತಿಕ ಮುಂಗಡ ನೀಡುತ್ತಾ ಬಂದಿದ್ದು, ಅದರಲ್ಲೂ ಒಬ್ಬ ನಿರ್ದೇಶಕರಿಗೆ 90 ಲಕ್ಷ ರೂಪಾಯಿಗೂ ಮೀರಿ ಮುಂಗಡವನ್ನು ಉಪನಿಯಮದಲ್ಲಿ ಅವಕಾಶ ಇಲ್ಲದೇ, ಸಂಘದ ಯಾವದೇ ಕೆಲಸ ಕಾರ್ಯಗಳು ಇಲ್ಲದೇ ಇದ್ದರೂ ಮುಂಗಡ ನೀಡಲಾಗಿರುತ್ತದೆ. ಸದರಿ ಮುಂಗಡ ಕುರಿತು ಆಕ್ಷೇಪಿಸಿ ರೂ.51 ಲಕ್ಷದಷ್ಟು ಬಡ್ಡಿ ವಸೂಲಿ ಮಾಡಲು 2023-24ನೇ ಸಾಲಿನ ಸಂಘದ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಲಾಗಿರುತ್ತದೆ.

ಈ ಪೈಕಿ 2023-24ನೇ ಸಾಲಿನಲ್ಲಿ ನಿರ್ದೇಶಕರಿಗೆ ನೀಡಿದ ಎಲ್ಲಾ ಮುಂಗಡ, ಸಂಘಕ್ಕೆ ನಗದು ಭರಣಾ ಮಾಡಿರುವುದಾಗಿ ಹಾಗೂ **ರೂ.39.33 ಲಕ್ಷ** ಬಡ್ಡಿಯನ್ನು 2023-24ನೇ ಸಾಲಿನಲ್ಲಿ ವಸೂಲಿ ಮಾಡಿರುವುದಾಗಿ ನಮೂದು ಮಾಡಿರುತ್ತಾರೆ. **(ಅನುಬಂಧ-2)**

ಅದರಂತೆ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಮೇಲೆ ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ ಇವರು ದಿನಾಂಕ: 27.01.2025 ರಂದು ಕಲಂ 68 ರಡಿ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಸಂಘಕ್ಕೆ ನಿರ್ದೇಶನ ನೀಡಿ ಆದೇಶ ಮಾಡಲಾಗಿರುತ್ತದೆ. **(ಅನುಬಂಧ-3**) ಈ ಕುರಿತು ಸಂಘದಿಂದ ತಹಲ್‌ವರೆಗೆ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ.

2024-25ನೇ ಸಾಲಿನ ಸಂಘದ ಲೆಕ್ಕಪರಿಶೋಧನಾ ವರದಿ ಇಲಾಖೆಗೆ ಸಲ್ಲಿಕೆಯಾಗಿರುವುದಿಲ್ಲ.

ಮಾಜಿ ನಿರ್ದೇಶಕರಿಗೆ, ಹಾಲಿ ನಿರ್ದೇಶಕರಿಗೆ, ಸಂಘದ ಹಾಲಿ ಮತ್ತು ಮಾಜಿ ಸಿಬ್ಬಂದಿಗಳಿಗೆ ಮತ್ತು ಇತರೆ ವ್ಯವಹಾರಕ್ಕೆ ನೀಡಿದ ಮುಂಗಡ ರೂ.84 ಲಕ್ಷ ಹಣ 2024-25 ನೇ ಸಾಲಿನಲ್ಲಿ ವಸೂಲಿಯಾದ ಬಗ್ಗೆ ಹಾಗೂ ಬಾಕಿ ಇರುವ ಕುರಿತು ವರದಿ ಪಡೆದು ಪರಿಶೀಲಿಸಿ ಕಾಯ್ದೆ ಮತ್ತು ನಿಯಮಗಳನ್ವಯ ಕ್ರಮವಿಡಲಾಗುವುದು.

**ಕಡತ ಸಂಖ್ಯೆ: ಸಿಒ 127 ಪಿಎಂಸಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

**THE KHANAPUR TALUKA AGRICULTURAL PRODUCE CO-OP MARKETING SOCIETY LTD. NANDGAD**

**Advance list as on 31-03-2024**

| S.N | Particulars | Purpose | Amount | Total |
|---|---|---|---|---|
| I | **HEAD OFFICE** | | 8446428.25 | **8446427.25** |
| | | | | |
| II | **P D S SECTION** | | | **171592.87** |
| | | | | |
| III | **HP SECTION** | | | **4145063.75** |
| 1 | H P C L Dharwad (Load Purcahse Advance) | Dharwad | 4145063.75 | |
| | | | | |
| IV | **FERTILIZER SECTION** | | | **4498621.19** |
| 1 | shri Anjaneya Agro Agenci | Belgaum | 4424220.00 | |
| 2 | Shri Venkateshwar Swa Seva sang | Belgaum | 150.22 | |
| 3 | IFFO E Bazar Belgaum | Belgaum | 2311.44 | |
| 4 | K S Co-op M Federation ltd Belgaum | Belgaum | 46852.53 | |
| 5 | M C F Hubli | Hubli | 9969.00 | |
| 6 | Zuari Industries Ltd Hubli | Hubli | 15118.00 | |
| | | | | |
| | **TOTAL** | | | **17261705.06** |

ACCOUNTANT

MANAGER

The Khanapur T.A.P.C.M.S. Ltd. ★ Nandgad, Tq. Khanapur, Dist. Belagavi ★ Reg.1800 31-01-1959 Ngd. Dt. BGM.

M/s. B. P. Jainagouda & Co. Chartered Accountants FRN 001262S

Scanned with OKEN Scanner

# KHANAPUR T A P C M S LTD NANDGAD

Ledger Balance : ADVANCE

DATE AS ON: 31/3/2024 HEAD OFFICE

The Khanapur T.A.P.C.M.S. Ltd. Reg.1800 31-01-1959 Ngd. Dt. BGM. Nandgad, Ta. Khanapur, Dist. Belagavi

| Sl.No | A/c No. | Name | Amount |
|---|---|---|---|
| 1 | 00001000002 | ARJUN NARAYAN KESAREKAR | 38000.00 |
| 2 | 00001000003 | YASHVANT RAVALAPPA KODOLI | 232233.00 |
| 3 | 00001000004 | PARASHRAM MAHADEV PATIL | 33000.00 |
| 4 | 00001000007 | BANAJI RAJARAM RANE | 14500.00 |
| 5 | 00001000009 | RAMCHANDRA BOMMAYYA NAYAK | 505508.00 |
| 6 | 00001000010 | RAJARAM YADAPPA GURAV | 32929.00 |
| 7 | 00001000011 | RAMCHANDRA DURGAPPA PATIL | 30000.00 |
| 8 | 00001000012 | BASAVARAJ SHIVANAND RAMGURWADI | 60300.00 |
| 9 | 00001000014 | PANDURANG TUKARAM SAVANT | 175000.00 |
| 10 | 00001000015 | MAHABALESHWAR RAMANGOUDA PATIL | 162200.00 |
| 11 | 00001000019 | PRAVEEN T. KALKAMBKAR | 25000.00 |
| 12 | 00001000022 | PANDURANG HARICHANDRA RANE | 3000.00 |
| 13 | 00001000024 | KALMESH DEMAPPA BHANGI | 5000.00 |
| 14 | 00001000027 | NAMDEV VITTAL GURAV | 72575.00 |
| 15 | 00001000031 | FATHER ANDREW FERNANDIS | 5000.00 |
| 16 | 00001000032 | VIJAY MALLAPPA KAPASE | 29169.00 |
| 17 | 00001000034 | I. M. SHIRGAPURMATH | 5000.00 |
| 18 | 00001000035 | MAHADEV GOPAL GAVADE | 10000.00 |
| 19 | 00001000039 | PKPS MANGYANKOPP | 104518.00 |
| | 00001000042 | K F C S C BELGAUM | 1.00 |
| 21 | 00001000044 | F C I HUBLI | 3446.00 |
| 22 | 00001000050 | SADARODDIN RAFIQ BASARIKATTI | 3962.00 |
| 23 | 00001000053 | DNYANESHWAR GANAPATI NILAJKAR | 374820.00 |
| 24 | 00001000055 | BALAPPA MARUTI KOOGI | 5000.00 |
| 25 | 00001000060 | BASHIR INNUSAB SANADI | 23100.00 |
| 26 | 00001000061 | NAGANNA BASAVANEPPA MALWAD | 637941.00 |
| 27 | 00001000066 | IRANNA BASAVRAJ DABBUNAVAR | 41000.00 |
| 28 | 00001000067 | NARAYAN H PATIL | 1000.00 |
| 29 | 00001000068 | BALESH KALLAPPA SANGOLLI | 283500.00 |
| 30 | 00001000069 | ABHAYKUMAR MAHAVEER PATIL | 82000.00 |
| 31 | 00001000073 | SHAM NARAYAN CHAVHAN | 1000.00 |
| 32 | 00001000074 | RAHUL NARAYAN DESAI | 700.00 |
| 33 | 00001000079 | NARAYANGOUDA TULSAPPGOUDA PATIL | 2087.00 |
| 34 | 00001000080 | LAXMAN RAMCHANDRA SUTAR | 5000.00 |
| 35 | 00001000082 | SURESH FAKIRAPPA KOLKAR | 50000.00 |
| 36 | 00001000083 | BISTAPPA DATTU MERAVA | 1940.00 |
| 37 | 00001000091 | ANANT BAPU PATIL | 1123359.32 |

FRN 001262S

Scanned with OKEN Scanner

| | | | |
|---|---|---|---|
| 38 | 00001000093 | DINESH R.TELKAR | 14000.00 |
| 39 | 00001000094 | SANJEEV CHANDRASHEKARAPP LANGOTISHETTAR | 130000.00 |
| 40 | 00001000101 | MUNAF GUDUSAB YALLUR | 8300.00 |
| 41 | 00001000102 | RAMESH NARAYAN HANAMSHET | 224728.28 |
| 42 | 00001000107 | NAGAPPA PARASHRAM TALWAR | 1000.00 |
| 43 | 00001000108 | MAHADEV PATIL | 500.00 |
| 44 | 00001000110 | MAHADEV VISHNUPANT DALAVI | 499860.00 |
| 45 | 00001000112 | PANDURANG NAIK, JAMBOTI | 1000.00 |
| 46 | 00001000117 | MAHANTESH RUDRAPPA KAMATAGI | 5000.00 |
| 47 | 00001000132 | SHIVANAND HUVAPPA SUNGAR | 7000.00 |
| 48 | 00001000133 | SIDDAPPA NAIK | 5000.00 |
| 49 | 00001000136 | RAYAPPA CHANDRAKANT MADAR | 33968.41 |
| 50 | 00001000150 | SHAHU ARJUN PATIL | 8180.00 |
| 51 | 00001000153 | SUNIL BALKRISHNA DALAL | 3900.00 |
| 52 | 00001000155 | JITENDRA TOPANNA MADAR | 55000.00 |
| 53 | 00001000157 | MAHARUDRAYYA GADAGAYYA HIREMATH | 450000.00 |
| 54 | 00001000162 | GANGADHAR MURAGEPPA WARAD | 80570.00 |
| 55 | 00001000165 | BHAURAO DEVAPPA PATIL | 43939.20 |
| 56 | 00001000177 | K F C S C BELGAUM ( N B MALWAD) | 2255220.04 |
| 57 | 00001000187 | HARUN M.SAKALI | 5000.00 |
| 58 | 00001000189 | NITIN S.GORE | 680.00 |
| 59 | 00001000190 | SAVITA SHANKAR BALEKUNDRI | 500.00 |
| 60 | 00001000195 | D C C BANK HALSHI | 6000.00 |
| 61 | 00001000197 | SADDAM R.TAMBADI | 5000.00 |
| 62 | 00001000198 | NETRA HUBLIKAR DESAI | 26400.00 |
| 63 | 00001000200 | BAPUSAHEB R PATIL | 371124.00 |
| 64 | 00001000204 | SHANKAR RUDRAPPA NANDAGADI | 21771.00 |
| | | Total | 8446427.25 |

**ACCOUNTANT** **MANAGER**

Scanned with OKEN Scanner

| | | | |
|---|---|---|---|
| | | ಲಗತ್ ಇಟ್ಟ ತಪ್ಶೆಗಳಂತೆ [illegible]ವಹಾರಗಳು ಆಗಿದ್ದು. ಇವುಗಳಿಗೆ ಸಂಭಂಧಿಸಿದಂತೆ ಲಾಗ್ ಬುಕ್ಕ ಇಡಲಾಗಿದೆ. ವಾಹನ ವಿಭಾಗಕ್ಕೆ ಪ್ರತ್ಯೇಕ ಸಿಬ್ಬಂದಿ ಇದ್ದು, ಅವುಗಳ ಉಸ್ತುವಾರಿ, ರಿಪೇರಿ,ವಿಮೆ, ಸಾಗಾಣಿಕೆ ಲೆಕ್ಕ ಇತ್ಯಾದಿಗಳನ್ನು ನಿರ್ವಹಿಸುತ್ತಾರೆ. ಇಂದನದ ಸರಾಸರಿಯನ್ನು ಆಯಾ ವಾಹನದ ಲಾಗಬುಕ್ಕಿನಲ್ಲಿ ನಮೂದಿಸಲಾಗಿದೆ. | |
| | 8 | ವರದಿ ಸಾಲಿನಲ್ಲಿ ವಿಲೇಮಾಡಿರುವ ವಾಹನದ ಕುರಿತು ವಿಮರ್ಷೆ. | ವರದಿಸಾಲಿನಲ್ಲಿ ಯಾವುದೇ ವಾಹನಗಳನ್ನು ವಿಲೇವಾರಿ ಮಾಡಲಾಗಿಲ್ಲ. |

(27) <u>ಆಖೈರು ದಾಸ್ತಾನು:</u>

| | |
|---|---|
| ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲ್ಪಟ್ಟಿದೆಯೇ ? ಸದರಿ ದಾಸ್ತಾನು ಬೆಲೆಗೆ ಅಥವಾ ಮಾರಾಟ ಬೆಲೆ ಇವುಗಳಲ್ಲಿ ಯಾವುದು ಕಡಿಮೆ ಅದರಂತೆ ದಾಸ್ತಾನು ಮೌಲ್ಯ ನಿರ್ಧರಿಸಿದ್ದಾರೆಯೇ? | ಹೌದು |
| ದಾಸ್ತಾನು ಆಗಿಂದಾಗ್ಗೆ ಇಲಾಖಾ ಆದಿಕಾರಿಗಳು/ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿದೆಯೆ? | ಪದಾಧಿಕಾರಿಗಳಿಂದ ಕಾಲ ಕಾಲಕ್ಕೆ ಪರಿಶೀಲಿಸಲಾಗಿದೆ |
| ದಾಸ್ತಾನು ರಿಜಿಸ್ಟರ್ ನಿಗದಿ ಪಡಿಸಿದ ನಮೂನೆಯಲ್ಲಿ ನಿರ್ವಹಿಸಲ್ಪಟ್ಟಿದೆಯೇ? | ಹೌದು |
| ಸಾಲಾಂತ್ಯಕ್ಕೆ ಜಡ್ತಿಯಾದ ದಾಸ್ತಾನು ವಿವರವುಳ್ಳ ಪಟ್ಟಿ/ಸಂಕ್ಷಿಪ್ತ ಪಟ್ಟಿ ವರದಿಗೆ ಲಗತ್ತಿಸಿದೆಯೇ? | ಹೌದು ಲಗತ್ತಿಸಿದೆ |

(28) <u>ಇತರೆ ಬರತಕ್ಕವುಗಳು: ರೂ 299068944.07</u>

ಸಂಘದ ಅಢಾವೆಯಲ್ಲಿ ತೋರಿಸಿದಂತೆ ಒಟ್ಟು ರೂ <u>299068944.07</u> ಇರುತ್ತವೆ. ಸಂಘದ ವ್ಯವಹಾರಗಳಿಗೆ ಸಂಭಂದಿಸಿದ ಸಂಸ್ಥೆಗಳೊಡನೆ ಮಾಡಿದ ವ್ಯವಹಾರಗಳಿಗೆ ಸಂಭಂಧಿಸಿದ ಮುಂಗಡ ಮೊತ್ತವಾಗಿರುತ್ತದೆ.ಆ ಪೈಕಿ ಈ ಕೆಳಗಿನವು ವಯಕ್ತಿಕ ಮುಂಗಡ ಇರುತ್ತದೆ.

| | |
|---|---|
| | 1) ವಿವಿಧ ಉದ್ದೇಶಗಳಿಗೆ ಕೊಡಮಾಡಿದ ಮುಂಗಡ ಇದ್ದು, ಯಾದಿ ಲಗತ್ತ ಇಡಲಾಗಿದೆ. ಈ ಪೈಕಿ ರೂ 172.61 ಲಕ್ಷದಷ್ಟು ಮುಂಗಡ ಇರುತ್ತದೆ..<br>ಈ ಹಿಂದಿನ ವರ್ಷದ ವರದಿಯ ಅನ್ವಯ, ಸಂಘವು ಕೆಲವು ನಿರ್ದೇಶಕರಿಗೆ, ಮಾಜಿ ಅಧ್ಯಕ್ಷರಿಗೆ, ಸಿಬ್ಬಂದಿಗೆ ಹಾಗೂ ಇತರೇ ವ್ಯಕ್ತಿಗಳಿಗೆ ಈ ಹಿಂದಿನ ( 2019 ರಿಂದ) ವರ್ಷಗಳಲ್ಲಿ ವಯಕ್ತಿಕ ಮುಂಗಡ ನೀಡುತ್ತಾ ಬಂದಿತ್ತು. ಅದರಲ್ಲೂ ಒಬ್ಬ ನಿರ್ದೇಶಕರಿಗೆ 90 ಲಕ್ಷ ರೂಪಾಯಿಗೂ ಮೀರಿ ಮುಂಗಡವನ್ನು ಉಪನಿಯಮದಲ್ಲಿ ಅವಕಾಶ ಇಲ್ಲದೇ, ಸಂಘದ ಯಾವದೇ ಕೆಲಸಕಾರ್ಯಗಳು ಇಲ್ಲದೇ ಮುಂಗಡ ಈ ಹಿಂದಿನ ವರ್ಷಗಳಲ್ಲಿ ನೀಡಲಾಗಿತ್ತು. ಸದರೀ ಮುಂಗಡ ಕುರಿತು ಆಕ್ಷೇಪಿಸಿ ರೂ 51 ಲಕ್ಷದಷ್ಟು ಬಡ್ಡಿ ವಸೂಲಿ ಮಾಡಲು ಸೂಚಿಸಿದ್ದರು. ಆ ಪೈಕಿ ವರದಿ ವರ್ಷದಲ್ಲಿ ನಿರ್ದೇಶಕರಿಗೆ ನೀಡಿದ ಎಲ್ಲ ಮುಂಗಡ ಸಂಘಕ್ಕೆ ನಗದು ಭರಣಾ ಮಾಡಿದೆ ಹಾಗೂ ರೂ 39.33 ಲಕ್ಷ ಬಡ್ಡಿ ವಸೂಲಿ ವರದಿ ವರ್ಷದಲ್ಲಿ ಮಾಡಲಾಗಿದೆ.<br>ಮುಂಗಡ ನೀಡಿಕೆ ಸಂಭಂಧಿಸಿದಂತೆ ಉಪನಿಯಮಗಳಲ್ಲಿನ ಅವಕಾಶ ಮತ್ತು ಸಂಘಕ್ಕೆ ಹಾನಿಯಾಗದ ರೀತಿಯಲ್ಲಿ, ಸಂಸ್ಥೆಯ ಯಾವ ಕೆಲಸಕ್ಕಾಗಿ ನೀಡಲಾಗುತ್ತಿದೆ ಎಂಬ ಚೌಕಾಸಿಯನ್ನು ಮಾಡಿ, ಮುಂಗಡ ನೀಡುವ ಮುಂಚೆ ಆಡಳಿತ ಸಮೀತಿ ಮಂಜೂರಾತಿ ಪಡೆದ ನಂತರವೇ ಮುಂಗಡ ನೀಡತಕ್ಕದ್ದು.. ಇವಾವುಗಳನ್ನು ಪರಿಗಣಿಸದೇ ಅನಾವಶ್ಯಕವಾಗಿ ನೀಡಲಾಗುವ ಮುಂಗಡದಿಂದಾಗುವ ಹಾನಿ ಮತ್ತು ವ್ಯತಿರಿಕ್ತ ಪರಿಣಾಮಗಳಿಗೆ ಸಂಘದ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕರು ಸಂಯುಕ್ತವಾಗಿ ಜವಾಬದಾರರಾಗುತ್ತಾರೆ.<br>2) ಇದಲ್ಲದೇ ಅಲ್ಲದೇ ಕೆ ಎಫ್ ಸಿ ಮುಂಗಡ ಅಂತ ಈ ಕಳೆದ ಕೆಲ ವರ್ಷಗಳಿಂದ ರೂ 22,42743.04 ತೋರಿಸುತ್ತಿದ್ದು, ಒಪ್ಪಿಗೆ ಪತ್ರ ಲಭ್ಯವಾಗುತ್ತಿಲ್ಲ ಅಂತ ತಿಳಿಸಿದ್ದಾರೆ. ಈ ಕುರಿತು ಆ ಅವಧಿಯ |



M/s. B. R. JANAGOUDA & CO.
FRN 0012626
Scanned with OKEN Scanner

ವ್ಯವಸ್ಥಾಪಕರು ಸಂಘಕ್ಕೆ ಲೇಖಿ ವಿವರಣೆ ನೀಡಿದ್ದು, " ಹಿಂದಿನ ಕೆಲ ವರ್ಷಗಳ ದಾಖಲೆಗಳನ್ನು ಮರುಪರಿಶೀಲಿಸಿ ನೋಡಬೇಕಿರುತ್ತದೆ. ಮರು ಪರಿಶೀಲನೆ ನಂತರ ಏನಾದರೂ ವ್ಯತ್ಯಾಸ ಇದ್ದಲ್ಲಿ ಬಡ್ಡಿ ಸಹಿತ ಸ್ವತಃ ಭರಣಾ ಮಾಡುತ್ತೇನೆ" ಅಂತ ಕಳೆದ ವರ್ಷ ತಿಳಿಸಿದ್ದರು. ಆದರೆ ಈ ವರೆಗೂ ಯಾವದೇ ಪ್ರಗತಿ ಇಲ್ಲ. ಈ ಕುರಿತು ಸದರೀಯವರಿಗೆ ಕ್ಷಿಪ್ರ ಕಾಲಮಿತಿ ಅವಕಾಶ ಕೊಟ್ಟು, ಅವರಿಂದಲೇ ಬಡ್ಡಿ ಸಹಿತ ವಸೂಲಿಸಲು ಕ್ರಮ ಇಡುವುದು. ಸಕಾಲಿಕ ಕ್ರಮ ಇಡದೇ ಇರುವದರಿಂದಾಗಬಹುದಾದ ಪರಿಣಾಮಗಳಿಗೂ ಸಹ ವ್ಯವಸ್ಥಾಪಕರು ಮತ್ತು ಆಡಳಿತ ಸಮೀತಿ ಸಂಯುಕ್ತವಾಗಿ ಜವಾಬದಾರರಾಗುತ್ತಾರೆ.

3)ಈ ಮೇಲಿನವುಗಳಲ್ಲದೇ ಸಂಘದ ಕೆಲ ಶಾಖೆಗಳ ಸಿಬ್ಬಂದಿಗಳು ಸಹ, ಯಾವದೇ ಮಂಜೂರಾತಿ, ಅನುಮತಿ ಇಲ್ಲದೇ ಮನಬಂದಂತೆ ಮುಂಗಡ ಪಡೆಯುತ್ತಿರುವದನ್ನು ಸಹ ಗಂಭೀರವಾಗಿ ಪಡೆಯುತ್ತಿರುವದನ್ನು ಗಮನಿಸಿದೆ. ಶಾಖೆಗಳಲ್ಲಿ ವ್ಯಾಪಾರ ವಹಿವಾಟು ಆದ ರಕಮನ್ನೇ ಕೇಂದ್ರ ಕಚೇರಿಗೆ ಭರಣಾ ಮಾಡದೆ, ನೇರವಾಗಿ ಮುಂಗಡ ರೂಪದಲ್ಲಿ ತಮ್ಮ ಹಂತದಲ್ಲಿ ಪಡೆದು, 2-3 ವರ್ಷಗಟ್ಟಲೇ ಮರುಪಾವತಿ ಮಾಡದೇ ಇರುವ ಪ್ರಸಂಗಗಳನ್ನೂ ಸಹ ಗಮನಿಸಿದೆ. ಈ ಕುರಿತು ಕೇಂದ್ರ ಕಚೇರಿ ಯಾವದೇ ಕ್ರಮ ಇಡದೇ ಮೌನ ವಹಿಸಿರುವದು ವಿಪರ್ಯಾಸವಾಗಿರುತ್ತದೆ. ಹೀಗಾಗಿ ದೊಡ್ಡ ಪ್ರಮಾಣದ ಮುಂಗಡಗಳು ಯಾವದೇ ಆದಾಯವಿಲ್ಲದೇ ಸಂಘಕ್ಕೆ ಹಾನಿ ಉಂಟು ಆಗುತ್ತಿದ್ದು, ಕೇಂದ್ರ ಕಚೇರಿ ಹಾಗೂ ಆಡಳಿತ ಮಂಡಳಿ ಸಹ ಸಂಯುಕ್ತವಾಗಿ ಜವಾಬದಾರರಾಗುತ್ತಾರೆ ಎಂಬುದನ್ನು ಗಮನಿಸಬೇಕು.

ಮುಂಗಡ ವಿಷಯದಲ್ಲಿ ನೀತಿನಿಯಮಗಳನ್ನು ಪಾಲಿಸದೇ,ಆರ್ಥಿಕ ನಿಯಂತ್ರಣವಿಲ್ಲದೇ ಇರುವದು. ಸಂಸ್ಥೆಯ ಆರ್ಥಿಕ ಸ್ಥಿತಿಯ ಮೇಲೆ ವಿಪರೀತ ಪರಿಣಾಮ ಬೀರುತ್ತಿರುವದು ಸ್ಪಷ್ಟವಾಗುತ್ತದೆ. ಕಾರಣ ಈ ವಿಷಯದಲ್ಲಿ ನಿಖರ ಬಿಗಿ ನೀತಿ ಅನುಸರಿಸದಿದ್ದಲ್ಲಿ ಇದರಿಂದಾಗಬಹುದಾದ ಹಾನಿಗಳಿಗೆ ವ್ಯವಸ್ಥಾಪಕರು ಮತ್ತು ಆಡಳಿತ ಮಂಡಳಿ ಸಂಯುಕ್ತವಾಗಿ ಜವಾಬದಾರರಾಗುತ್ತಾರೆ.

ಬರತಕ್ಕ ಮುಂಗಡ ವಸೂಲಿಗೆ ತೀವ್ರ ಮತ್ತು ಸಕಾಲಿಕ ಕ್ರಮದ ಅವಶ್ಯಕತೆಯನ್ನು ಒತ್ತಿ ಹೇಳಲಾಗಿದೆ.

| | ಬರತಕ್ಕವುಗಳು | ಮೊತ್ತ | ವಿವರ |
|---|---|---|---|
| 2 | ಆಹಾರಧಾನ್ಯ ಕ್ಲೇಮ(ಡಿಸಿ) | 6511266.00 | ಕಂದಾಯ ಇಲಾಖೆಯಿಂದ ಬರಬೇಕಾದ ಕ್ಲೆಮ ರಕಮು ಇದ್ದು, ನಂತರದ ಅವಧಿಯಲ್ಲಿ ಜಮೆಯಾಗಿದೆ. |
| 3 | ಟೆಂಡರ ಠೇವು | 45000.00 | ಸಾರಿಗೆಗೆ ಕೊಟ್ಟ ಟೆಂಡರ ಠೇವು ಇರುತ್ತದೆ. |
| 4 | ಸಂಡ್ರೀ ಡೆಟರ್ಸ | 2701064.88 | ಬರತಕ್ಕ ಬಾಕಿ ಇದ್ದು ಯಾದಿ ಲಗತ್ ಇದೆ. |
| 5 | ಬರತಕ್ಕ ಬಾಡಿಗೆ | 28275.00 | ಬರತಕ್ಕ ಹಳೇ ಬಾಕಿ ಇದ್ದು ವಸೂಲಿಗೆ ಕ್ರಮವಿಟ್ಟಿಲ್ಲ |
| 6 | ಸಾಗರ ಟ್ರಾನಸ್ಪೋರ್ಟ ಬೆಳಗಾವಿ | 366327.00 | ಬರತಕ್ಕ ಹಳೇ ಬಾಕಿ ಇದ್ದು, ವಸೂಲಿ ಪ್ರಕ್ರಿಯೆ ಆಗಿಲ್ಲ |
| 7 | ಗಣೇಶ ಟ್ರಾನಸ್ಪೋರ್ಟ | 41058.00 | ,, |
| 8 | ಕೆಎಸ್ ಸಿ ಎಫ್ ಸಿ ಬೆಂಗಳೂರ | 95915.06 | ,, |
| 9 | ,, ಬೆಳಗಾವಿ | 35238.00 | ,, |
| 10 | ನಿವೇಶನ ಖರೀದಿ ಮುಂಗಡ | 735950.00 | ನಿವೇಶನ ಖರೀದಿ ಬಾಕಿ ಇದೆ |
| 11 | ಲೆವಲಿಂಗ ಚಾರ್ಜ | 33390.00 | ಜಮಾಖರ್ಚು ಮಾಡಿಕೊಳ್ಳಬೇಕಿದೆ |
| 12 | ಬೆಂಬಲ ಬೆಲ ಮಾರ್ಜಿನ್ | 97114.00 | ಫೆಡರೇಶನಿಂದ ಬರಬೇಕಿದ್ದ ಬಾಕಿ ಇದೆ. |
| 13 | ಸಿಲಿಂಡರ ರೆಗ್ಯುಲೇಟರ ಠೇವು | 247404.98 | ಬರತಕ್ಕ ಬಿಲ್ಲು ನಿರಂತರ ವ್ಯವಹಾರದಲ್ಲಲಿನ ರಕಮು |
| 14 | ಟಿ.ಡಿ.ಎಸ್ ಬರಕ್ಕದ್ದು | 18319.00 | ಬರತಕ್ಕ ವ್ಯಾಟ ಇರುತ್ತದೆ. |
| 15 | ರಿಕಾರ್ಡ ರೂಮ ರಚನೆ ಮುಂಗಡ | 36000.00 | ಪ್ರಗತಿಯಲ್ಲಿರುವ ಕಾರಣ ಮುಂಗಡ ಮುಂದುವರೆದಿದೆ. |
| 16 | ಡ್ರೈವ ಟ್ಯಾಕ ಕಾರ್ಡ | 174382.96 | ಬರತಕ್ಕದ್ದು ಇರುತ್ತದೆ. |
| 17 | ಕರ ಡಿಪಾಸಿಟ | 0.00 | ಬರತಕ್ಕ ಕರ ಡಿಪಾಸಿಟ ಇರುತ್ತದೆ. |
| 18 | ಸೆಕ್ಯುರಿಟಿ ಠೇವು (ಎಚ ಪಿ) | 300500.00 | ಸೆಕುರಿಟಿ ಠೇವು (ಎಚ ಪಿ) ಇರುತ್ತದೆ. |



M/s. R. P. JAVAGONDA & CO.
FRN 001220S

Scanned with OKEN Scanner

**ಕರ್ನಾಟಕ ಸರಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, 1 ನೇ ಮಹಡಿ, ಸಹಕಾರ ಆಡಳಿತ ಭವನ, ಕೆಹೆಚ್‌ಬಿ ಹೆರಿಟೇಜ ಎದುರು, ಜಕ್ಕೇರಿ ಹೊಂಡ, ಬೆಳಗಾವಿ. ದೂ.ಸಂ: 0831-2407248.**
**E-mail :drcs-belgaum-ka@nic.in, drcsbelagavi@gmail.com, drcsaudit2024@gmail.com**

ಕ್ರ:ಡಿಆರ್‌ಎಲ್/ಎಂಕೆಟಿ/ಲೆ.ಪ/ಸಿಆರ್-71/2024-25 ದಿನಾಂಕ:27/01/2025

ವಿಷಯ : ದಿ. ಖಾನಾಪೂರ ತಾಲೂಕಾ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ, ನಂದಗಡ, ತಾ:ಖಾನಾಪೂರ, ಜಿ:ಬೆಳಗಾವಿ ಈ ಸಂಘದ ಸನ್ 2023-24 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸಂಘದ ವ್ಯವಹಾರಗಳಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಸರಿಪಡಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68(1) ರಡಿ ನಿರ್ದೇಶನ ನೀಡುವ ಕುರಿತು.

ಉಲ್ಲೇಖ: ಮೆ: ಬಿ.ಪಿ. ಜನಗೌಡಾ & ಕಂ. ಚಾರ್ಟರ್ಡ ಅಕೌಂಟೆಂಟ್ಸ್, ಬೆಳಗಾವಿ ಇವರ ಲೆಕ್ಕಪರಿಶೋಧನಾ ವರದಿ ದಿನಾಂಕ: 22-08-2024.

*************

**ಪೀಠಿಕೆ :~**

ದಿ. ಖಾನಾಪೂರ ತಾಲೂಕಾ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ, ನಂದಗಡ. ತಾ:ಖಾನಾಪೂರ ಜಿ:ಬೆಳಗಾವಿ ಈ ಸಂಘದ ಸನ್ 2023-24 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 63 ರನ್ವಯ ಮೆ: ಬಿ.ಪಿ. ಜನಗೌಡಾ & ಕಂ. ಚಾರ್ಟರ್ಡ ಅಕೌಂಟೆಂಟ್ಸ್, ಬೆಳಗಾವಿ ಇವರು ಜರುಗಿಸಿ ಈ ಕಾರ್ಯಾಲಯಕ್ಕೆ ಉಲ್ಲೇಖದನ್ವಯ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಲೆಕ್ಕ ಪರಿಶೋಧನಾ ವರದಿಯಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ಸರಿಪಡಿಸುವುದಕ್ಕಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68 ರಡಿ ನಿರ್ದೇಶಿಸುವ ಆದೇಶವನ್ನು ಮಾಡಿ ಆದೇಶದಲ್ಲಿ ನಮೂದಿಸಿರುವ ಕಾಲಾವಧಿಯೊಳಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ನಿಯಮಗಳು 1960 ರನ್ವಯ ಅವಶ್ಯ ಕ್ರಮಗಳನ್ನು ನಿಯಮಾನುಸಾರ ತೆಗೆದುಕೊಂಡು ಅನುಪಾಲನೆಯ ವರದಿಯನ್ನು ಸಲ್ಲಿಸುವಂತೆ ಸಂಘಕ್ಕೆ ನಿರ್ದೇಶಿಸಲು ಈ ಕೆಳಗಿನಂತೆ ಆದೇಶಿಸಲಾಗಿದೆ.

Deputy Registrar of Co-operative Societies, Belagavi / ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ಬೆಳಗಾವಿ

## ~: ಆದೇಶ :~

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 68 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಓ71/ಸಿಎಲ್ಎಂ/2016 ದಿನಾಂಕ: 06-12-2016 ರ ಅಧಿಕಾರದನ್ವಯ ರವೀಂದ್ರ ಪ. ಪಾಟೀಲ, ಸಹಕಾರ ಸಂಘಗಳ ಉಪ ನಿಬಂಧಕರು ಬೆಳಗಾವಿ ಜಿಲ್ಲೆ, ಬೆಳಗಾವಿ ಆದ ನಾನು ದಿ. ಖಾನಾಪೂರ ತಾಲೂಕಾ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ, ನಂದಗಡ, ತಾ:ಖಾನಾಪೂರ ಜಿ:ಬೆಳಗಾವಿ ಈ ಸಂಘದ ಕಲಂ 63 ರಡಿ ಜರುಗಿಸಲಾದ ಸನ್ 2023-24 ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಈ ಕೆಳಕಂಡ ನ್ಯೂನ್ಯತೆಗಳನ್ನು ಸರಿಪಡಿಸಲು ನಿರ್ದೇಶನವನ್ನು ನೀಡಿ ಆದೇಶಿಸಲಾಗಿದೆ.



Scanned with CamScanner

| ಕ್ರಮ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನ್ಯತೆಯ ಸಂಕ್ಷಿಪ್ತ ವಿವರ |
|---|---|---|
| 1 | 8 | ಆಂತರಿಕ ಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡುವ ಕುರಿತು. |
| 2 | 11 | ಗಂಭೀರ ಸ್ವರೂಪದ ಆಕ್ಷೇಪಣೆಗಳ ಕುರಿತು. |
| 3 | 24(8)(9) | ಬಡ್ಡಿ ಪಡೆಯದೇ ಅಡಮಾನ ಸಾಲ ತೀರುವಳಿ ಮಾಡಿದ ಕುರಿತು. |
| 4 | 24(5) | ಸುಸ್ತಿದಾರರ ಕ್ರಮ ಕುರಿತು. |
| 5 | 24(14) | ಸಾಲಗಳಲ್ಲಿನ ನ್ಯೂನ್ಯತೆ ಕುರಿತು. |
| 6 | 22 | ಹೊಸ ಕಟ್ಟಡ ರಚನೆಗೆ ನಿಯಮಾವಳಿ ಅನುಸರಿಸದೇ ಇರುವ ಕುರಿತು. |
| 7 | 28 | ವ್ಯಯಕ್ತಿಕ ಮುಂಗಡ ನೀಡಿಕೆ ಕುರಿತು. |
| 8 | 36 | ಲೆಕ್ಕ ಪತ್ರಗಳ ನಿರ್ವಹಣೆ ಕುರಿತು. |
| 9 | 37 | ಲೋಪದೋಷಗಳು ಮತ್ತು ಸೂಚನೆಗಳು. |
| 10 | 37 | ಲೆಕ್ಕ ಪರಿಶೋಧಕರ ಸಲಹೆ ಹಾಗೂ ಸೂಚನೆಗಳು ;<br>ಮುಂದುವರೆದ ಲೋಪಗಳು ಮತ್ತು ಸೂಚನೆಗಳು:–<br>1) ಕರ್ನಾಟಕ ಸಹಕಾರ ಸಂಘಗಳ ನಿಯಮ 29, ಇದೇ ವರದಿಯ ಪುಟ ನಂ. 4 ಕಂಡಿಕೆ 9 ರಲ್ಲಿ ತಿಳಿಸಿದ ತಃಖ್ತೆಗಳನ್ನು ಸಕಾಲದಲ್ಲಿ ತಯಾರಿಸಿ ಹಾಜರ ಪಡಿಸುವುದು ಅಗತ್ಯವಿದೆ.<br>2) ಮುಂಗಡ ನೀಡಿಕೆ ಸಂಬಂಧಿಸಿದಂತೆ ಉಪನಿಯಮಗಳಲ್ಲಿನ ಅವಕಾಶ ಮತ್ತು ಸಂಘಕ್ಕೆ ಹಾನಿಯಾಗದ ರೀತಿಯಲ್ಲಿ ಸಂಸ್ಥೆಯ ಯಾವ ಕೆಲಸಕ್ಕೆ ನೀಡಲಾಗುತ್ತಿದೆ ಎಂಬ ಚೌಕಾಸಿಯನ್ನು ಮಾಡಿ, ಮುಂಗಡ ನೀಡುವ ಮುಂಚೆ ಆಡಳಿತ ಸಮಿತಿ ಮಂಜೂರಾತಿ ಪಡೆದ ನಂತರವೇ ಮುಂಗಡ ನೀಡತಕ್ಕದ್ದು. ಇವಾವುಗಳನ್ನು ಪರಿಗಣಿಸದೇ ಅನಾವಶ್ಯಕವಾಗಿ ನೀಡಲಾಗುವ ಮುಂಗಡದಿಂದಾಗುವ ಹಾನಿ ಮತ್ತು ವ್ಯತಿರಿಕ್ತ ಪರಿಣಾಮಗಳಿಗೆ ಸಂಘದ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕರು ಸಂಯುಕ್ತವಾಗಿ ಜವಾಬ್ದಾರರಾಗುತ್ತಾರೆ.<br>3) ಕೆ ಎಫ್ ಸಿ ಮುಂಗಡ ಅಂತ ಈ ಕಳೇದ ಕೆಲ ವರ್ಷಗಳಿಂದ ರೂ.22,42,743–04 ತೋರಿಸುತ್ತಿದ್ದು, ಒಪ್ಪಿಗೆ ಪತ್ರ ಲಭ್ಯವಾಗುತ್ತಿಲ್ಲ ಅಂತ ತಿಳಿಸಿದ್ದಾರೆ. ಈ ಕುರಿತು ಆ ಅವಧಿಯ ವ್ಯವಸ್ಥಾಪಕರು ಕಳೇದ ವರ್ಷವೇ ಸಂಘಕ್ಕೆ ಲೇಖಿ ವಿವರಣೆ ನೀಡಿದ್ದು, " ಹಿಂದಿನ ಕೆಲ ವರ್ಷಗಳ ದಾಖಲೆಗಳನ್ನು ಮರುಪರಿಶೀಲಿಸಿ ನೋಡಬೇಕಿರುತ್ತದೆ. ಮರು ಪರಿಶೀಲನೆ ನಂತರ ಏನಾದರೂ ವ್ಯತ್ಯಾಸ ಇದ್ದಲ್ಲಿ ಬಡ್ಡಿ ಸಹಿತ ಸ್ವತಃ ಭರಣಾ ಮಾಡುತ್ತೇನೆ" ಅಂತ ಕಳೇದ ವರ್ಷ ತಿಳಿಸಿದ್ದರು. ಆದರೆ ಈವರೆಗೂ ಯಾವುದೇ ಪ್ರಗತಿ ಇಲ್ಲ. ಈ ಕುರಿತು ಸದರೀಯವರಿಗೆ ಕ್ಷಿಪ್ರ ಕಾಲಮಿತಿ ಅವಕಾಶ ಕೊಟ್ಟು, ಅವರಿಂದಲೇ ಬಡ್ಡಿ ಸಹಿತ ವಸೂಲಿಸಲು ಕ್ರಮ ಇಡುವುದು. ಸಕಾಲಿಕ ಕ್ರಮ ಇಡದೇ ಇರುವದರಿಂದಾಗಬಹುದಾದ ಪರಿಣಾಮಗಳಿಗೂ ಸಹ ವ್ಯವಸ್ಥಾಪಕರು ಮತ್ತು ಆಡಳಿತ ಸಮಿತಿ ಸಂಯುಕ್ತವಾಗಿ ಜವಾಬ್ದಾರರಾಗುತ್ತಾರೆ. |



Scanned with CamScanner

4) ಸಂಘದ ವ್ಯವಹಾರಗಳಿಗೆ ಸಂಬಂಧಿಸಿದ ಕಂತ್ರಾಟುದಾರರು, ಬಾಡಿಗೆ ವಾಹನದವರು, ಪೂರೈಕೆದಾರರು ಇವರನ್ನು ನಿಯಮಾನುಸಾರ ನಾಮ ಮಾತ್ರ ಸದಸ್ಯರನ್ನಾಗಿ ಮಾಡಿಕೊಳ್ಳುವದು ಅಗತ್ಯವಿದೆ.

5) ಖರ್ಚು ಪಾವತಿಗಳ ಮೇಲೆ ಅನುಕ್ರಮ ನಂಬರ ಹಾಕುವ ಪದ್ಧತಿ ಇರುವುದಿಲ್ಲ. ತಪ್ಪದೇಖರ್ಚು ಪಾವತಿಗಳ ಮೇಲೆ ಅನುಕ್ರಮ ನಂಬರ ಹಾಕಬೇಕು.

6) ಸಂಘವು ಪಡೆಯುತ್ತಿರುವ ಮುದ್ದತ ಠೇವುಗಳಿಗೆ ಸಂಬಂಧಿಸಿದಂತೆ ಠೇವು ರಶೀದಿಗಳನ್ನು ಕೊಡಲಾಗುತ್ತಿದೆ. ಹಾಗೆ ಕೊಡಮಾಡುವ ರಶೀದಿಗಳು ಅನುಕ್ರಮವಾಗಿ ತೆಗೆದುವಗಳಾಗಿರುವ ಕುರಿತು ಖಾತ್ರಿ ಪಡಿಸಿಕೊಳ್ಳುವದು.

7) ಸಂಘವು ನಿತ್ಯದ ಕೆಲ ಖರ್ಚು ವೆಚ್ಚವನ್ನು ನಿಯಂತ್ರಿಸುವದು ಅತೀವ ಅಗತ್ಯ ಅಂತಾ ಅಭಿಪ್ರಾಯ ಪಡಲಾಗಿದೆ.

8) ಸಂಘವು ಠೇವಿನ ಬಡ್ಡಿ ಪಾವತಿ ಕಾಲಕ್ಕೆ ವರಮಾನತೆರಿಗೆ ನಿಯಮಗಳನ್ನು ಪಾಲಿಸಿರುವುದಿಲ್ಲ. ಪಾಲಿಸುವದು ಅಗತ್ಯವಿದೆ. ಸಂಘವು ಕನಿಷ್ಟ ಮೀಸಲು ರಜಿಸ್ಟರನ್ನು ಇಟ್ಟಿರುವುದಿಲ್ಲ. ಹಾಗೂ ದ್ರವ್ಯಾಸ್ತಿಯನ್ನು ನಿರ್ವಹಿಸಿರುವುದಿಲ್ಲ. ಇವುಗಳನ್ನು ಇಡುವದು ಅಗತ್ಯವಿದೆ.

9) ಕೆಲವೊಂದು ಹಳೇ ಬಾಕಿಗಳು ಬರತಕ್ಕದ್ದು ಮತ್ತು ಕೊಡತಕ್ಕವುಗಳು ಇದ್ದು, ಇವುಗಳನ್ನು ತೀವ್ರ ವಿಲೇವಾರಿ ಮಾಡಬೇಕು.

10) ಆಂತರಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿದ ಎಲ್ಲ ಲೋಪದೋಷಗಳನ್ನು ತೀವ್ರ ತಿದ್ದುಪಡೆ ಮಾಡಿಕೊಳ್ಳುವುದು ಮತ್ತು ಸೂಚನೆಗಳನ್ನು ಪಾಲನೆಗೆ ತರುವುದು ಅಗತ್ಯವಿದೆ.

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ
Deputy Registrar of Co-operative Societies
Belagavi
ಬೆಳಗಾವಿ

11) ಸಂಘವು ಸೇವಾ ನಿಯಮಾವಳಿ, ವೇತನ ಶ್ರೇಣಿ, ಸಿಬ್ಬಂದಿ ಬಲ ಇತ್ಯಾದಿಗಳೂ ಸನ್ 1984 ರಲ್ಲಿ ಮಾಡಿಕೊಂಡಿದ್ದು, ತೀರ ಹಳೇಯವು ಇರುತ್ತವೆ. ಸಂಘದ ಆಡಳಿತವು ಕ್ರೋಢೀಕೃತ ರೂಪದಲ್ಲಿ ವೇತನ / ಇನ್‌ಕ್ರಿಮೆಂಟಗಳನ್ನು ಹೆಚ್ಚಳ ಮಾಡುತ್ತಿದೆ. ಇದು ಅವೈಜ್ಞಾನಿಕವಾಗಿದ್ದು, ನಿಯಮಾನುಸಾರ ವೇತನ ಶ್ರೇಣಿ, ಸಂಖ್ಯಾಬಲ, ಸೇವಾ ನಿಯಮಾವಳಿ, ಸಿಬ್ಬಂದಿಯೊಡನೆ ಒಪ್ಪಂದ ಪತ್ರ ಇತ್ಯಾದಿಗಳನ್ನು ಮಾಡಿಕೊಳ್ಳುವುದು ಶಾಸನಬದ್ಧವಾಗಿದೆ. ಈ ಕುರಿತು ಕಳೇದ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿಸಿದ್ದಾಗ್ಯೂ ಸಹ ನಿಖರ ಕ್ರಮಕೈಗೊಂಡಿಲ್ಲ.

12) ಸಂಘದ ಸಿಬ್ಬಂದಿ ಕರ್ತವ್ಯ ಮತ್ತು ಜವಾಬ್ದಾರಿ ನಿಗದಿಪಡಿಸಿ, ಕೆಲಸ ಕಾರ್ಯದ ಮೇಲ್ವಿಚಾರಣೆ ನಡೆಸುವದು. ಅದರಂತೆ ಕಾರ್ಯ ವಿಂಗಡನೆ ಅದಲು ಬದಲು ಮಾಡಿಲ್ಲ ವಿಭಾಗಗಳಲ್ಲಿ ಎಲ್ಲರೂ ಪರಿಣಿತರಾಗುವಂತೆ ವ್ಯವಸ್ಥಿಸುವದು ಸೂಕ್ತ ಅಂತಾ ಅಭಿಪ್ರಾಯ ಪಡಲಾಗಿದೆ.

**ಪ್ರಸಕ್ತ ಅವಧಿಯಲ್ಲಿನ ಲೋಪಗಳು ಮತ್ತು ಸೂಚನೆಗಳು:-**

1) ಕಳೇದ ವರ್ಷದ ವರದಿಯಲ್ಲಿ ನಮೂದಿಸಿದಂತೆ, ಕೆಲವು ಅಡಮಾನ ಸಾಲಗಳಿಗೆ (ರೂ.18.20 ಲಕ್ಷ ಸಾಲಗಳಿಗೆ) ಬಡ್ಡಿ ಪಡೆಯದೇ ಸಾಲದ ಅಸಲು ಮಾತ್ರ ಪಡೆದು ಖಾತೆಕ್ಲೋಜ್ ಮಾಡಿದ್ದನ್ನು ಆಕ್ಷೇಪಿಸಿದೆ.



Scanned with CamScanner

ಅಂಥವಲ್ಲ ಸಾಲಗಳ ಮೇಲಿನ ಬಡ್ಡಿಯನ್ನು ಕೂಡಲೇ ವಸೂಲಿ ಮಾಡುವುದು. ಇಲ್ಲವಾದಲ್ಲಿ ಸಂಬಂಧಿಸಿದ ಸಿಬ್ಬಂದಿ ಜವಾಬ್ದಾರರಾಗುತ್ತಾರೆ ಅಂತ ನಮೂದಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ.

2) ಶ್ರೀ ಅಭಯ ಪಾಟೀಲ ವ್ಯವಸ್ಥಾಪಕರು ದಿನಾಂಕ:31-03-2024 ರಂದು ಹಾಗೂ ಶ್ರೀ ಎಂ.ಆರ್. ಪಾಟೀಲ ಲೆಕ್ಕಾಧಿಕಾರಿಗಳು ಇವರು ದಿ.31-05-2024 ನಿವೃತ್ತಿ ಹೊಂದಿರುತ್ತಾರೆ. ಇವರನ್ನು ಕ್ರೋಢೀಕೃತ ಗೌರವಧನ ನಿರ್ಧರಿಸಿ ಮರು ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ನೇಮಕಾತಿನಿಯಮಗಳನ್ನು ಮತ್ತು ಮರು ನೇಮಕಾತಿಗೆ ಸಂಬಂಧಿಸಿದ ಕಾಯ್ದೆ ನಿಯಮಗಳನ್ನು ಪಾಲಿಸುವುದು ಕಡ್ಡಾಯವಿರುತ್ತದೆ. ಎಂಬುದನ್ನು ಗಮನಿಸಬೇಕು.

3) ವರದಿ ವರ್ಷದಲ್ಲಿ ಲೋಂಡಾದಲ್ಲಿ ಹೊಸ ಕಟ್ಟಡ ರೂ.24,15,500/-ವೆಚ್ಚ ಮಾಡಿ ನಿರ್ಮಿಸಲಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಹಾಗೂ ಅಭಿಯಂತರರಿಂದ ಯೋಜನಾ ವೆಚ್ಚದ ಮಂಜೂರಾತಿ ಪಡೆಯಲಾಗಿದೆ. ಆದರೆ ಕಟ್ಟಡದ ರಚನೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಮಂಜೂರಿ ಹಾಗೂ ಟೆಂಡರ ಪ್ರಕ್ರಿಯೆಗಳನ್ನು ಮಾಡಿರುವುದಿಲ್ಲ. ಅಲ್ಲದೇ ಸಂಘದಲ್ಲಿ ತೃಪ್ತಿದಾಯಕ ಕಟ್ಟಡ ನಿಧಿ ಇಲ್ಲದೇ ಸಂಘದ ನಿಧಿ ವಿನಿಯೋಗಿಸಿ ಕಟ್ಟಿದ್ದು, ತತ್ಸಂಬಂಧಿತ ನಿಯಮಗಳ ಉಲ್ಲಂಘಣೆಯಾಗಿರುತ್ತದೆ.

4) ನಿಷ್ಕ್ರೀಯ ಬ್ಯಾಂಕುಗಳಿಂದಲೂ ಸಹ ನಿಖರವಾದ ಖಾತೆ ಉತಾರ ಪಡೆದು, ಬಾಕಿಗಳನ್ನು ಸರಿಪಡಿಸಿಕೊಳ್ಳಬೇಕು. ಹಾಗೂ ಅನಾವಶ್ಯಕ ಖಾತೆಗಳನ್ನು ಮುಚ್ಚಬೇಕು.

5) ಕೊಡತಕ್ಕ ಮತ್ತು ಬರತಕ್ಕ ಎಲ್ಲ ಬಾಬುಗಳಿಗೂ ಒಪ್ಪಿಗೆ ಪತ್ರ ಕಡ್ಡಾಯವಾಗಿ ಪಡೆಯುವದು.

6) ಗಣಕೀಕರಣ ಲೆಕ್ಕ ಪತ್ರಗಳನ್ನು ಸುರಕ್ಷಿತತೆ ದೃಷ್ಟಿಯಿಂದ ಸಿಸ್ ಲಾಕ ಗೊಳಿಸಿಲ್ಲ. ಲೆಕ್ಕ ಪರಿಶೋಧನೆಗೆ ಎಡಿಟ್ ಹಿಸ್ಟರಿ ಶೀಟ ಪೂರೈಸಿಲ್ಲ.

7) ಗಣಕೀಕೃತ ನಗದು ಪುಸ್ತಕಕ್ಕೂ ಮತ್ತು ಸ್ಕ್ರೋಲ್ ಬುಕ್ಕಿನಲ್ಲಿ ನಮೂದಿಸಿದ ಶಿಲ್ಕು ರಕಮಿಗೂ ಆಗಾಗ ವ್ಯತ್ಯಾಸ ಇರುವುದನ್ನು ಗಮನಿಸಿದೆ. ವರ್ಷಾಂತ್ಯದ ನಗದು ಪುಸ್ತಕ ಬಹಳ ದಿನಗಳವರೆಗೆ ಒಪನ್ ಇಡುವುದರಿಂದ ಹೀಗೆ ಆಗುತ್ತದೆ ಎಂದು ಹೇಳಲಾಗಿದೆ. ಆದರೆ ಈ ಕ್ರಮವು ಅವೈಜ್ಞಾನಿಕವಾಗಿದೆ.

8) ತಿದ್ದುಪಡೆಯಾದ ಉಪನಿಯಮ (46 ರಿಂದ 87) ದನ್ವಯ ನೌಕರರ ಸೇವಾ ಷರತ್ತುಗಳು, ಉಪದಾನ, ಸೇವಾ ಸೌಲಭ್ಯಗಳ ಕುರಿತು ನಿಯಮಾನುಸಾರ ಕ್ರಮ ಇಡಲು ಸೂಚಿಸಿದೆ.

9) ವೇಜಸ್ ಅಂತಾ ಕಾಲ ಕಾಲಕ್ಕೆ ಖರ್ಚು ಹಾಕಲಾಗುತ್ತಿದೆ. ಆದರೆ ಯಾವ ಬಾಬತ್ತು, ಎಷ್ಟು ದಿನದ ಕೆಲಸ, ದಿನಕ್ಕೆ ಎಷ್ಟು ಇತ್ಯಾದಿ ವಿವರಗಳನ್ನು ನಮೂದಿಸಿಲ್ಲ.

10) ಠೇವುದಾರರ ಮೇಲಿನ ಬಡ್ಡಿ ಮೇಲಿನ ಟಿ.ಡಿ.ಎಸ್. ಠೇವುದಾರರಿಂದ ಪಡೆಯದೇ ಸಂಘವು ಸ್ವತಃ ಭರಿಸುತ್ತಾ ಬಂದಿರುವದು ಸಂಘಕ್ಕೆ ವಿನಾಕಾರಣ ಹಾನಿ ಆಗುತ್ತಿದೆ. ಕಾರಣ ಠೇವುದಾರರಿಗೆ ನೀಡುವ ಬಡ್ಡಿಯ

Deputy Registrar of Co-operative Societies, Belagavi



Scanned with CamScanner

| | | |
|---|---|---|
| | | ಮೇಲಿನ ತೆರಿಗೆಯನ್ನು ಸಂಘವು ಭರಿಸುವುದನ್ನು ನಿಲ್ಲಿಸಬೇಕು ಮತ್ತು ಠೇವುದಾರರಿಂದಲೇ ವಸೂಲಿಸಬೇಕು.<br>11) ಕೆಲವು ಶಾಖೆಗಳಲ್ಲಿ ಅನಾವಶ್ಯಕ ಕೈ ಶೀಲ್ಕು ಇಟ್ಟುಕೊಂಡಿದ್ದು, ಕೇಂದ್ರ ಕಚೇರಿಗೆ ಶಾಖೆಗಳ ಮೇಲೆ ಸೂಕ್ತ ನಿಯಂತ್ರಣ ಇಲ್ಲದಿರುವುದು ಕಂಡು ಬರುತ್ತದೆ. ಹಾಗೇಯೇ ಶಾಖೆಗಳಲ್ಲಿ ನಿತ್ಯದ ವ್ಯವಹಾರಗಳನ್ನು ಆದಿನವೇ ಬರೆಯದೇ ತಿಂಗಳಾತ್ಯಕ್ಕೆ ಬರೆಯಲಾಗುತ್ತಿದೆ. ಹಾಗೂ ಕೇಂದ್ರ ಕಚೇರಿಗೆ ವಿಳಂಬ ಮಾಡಿ ಶೀಲ್ಕು ಜಮೆ ಮಾಡಲಾಗುತ್ತದೆ. ಹೀಗಾಗಿ ಕೈ ಶೀಲ್ಕು ಅನಾವಶ್ಯಕವಾಗಿ ಶಾಖೆಯಲ್ಲಿ ಉಳಿಯುತ್ತಿದೆ. ಉದಾ: ಪಾರಿಶ್ವಾಡ ಶಾಖೆ, ಜಾಂಬೋಟಿ ಶಾಖೆ ಹಾಗೂ ಖಾನಾಪೂರ ಶಾಖೆ.<br>12) ಇತರೇ ಲೋಪಗಳು ಮತ್ತು ಸೂಚನೆಗಳ ಯಾದಿಯನ್ನು ಪ್ರತ್ಯೇಕವಾಗಿ ನೀಡಿದ್ದು, ಅದನ್ನು ಸಹ ಪರಿಗಣಿಸುವುದಲ್ಲದೇ ಈ ಹಿಂದೆ ಆಂತರಿಕ ಲೆಕ್ಕ ಪರಿಶೋಧಕರು ಮುಂಗಡಕ್ಕೆ ಸಂಬಂಧಿಸಿದ ಸೂಚನೆಯನ್ನು ಅಮಲಿನಲ್ಲಿ ತಪ್ಪದೇ ತರಲು ಸೂಚಿಸಿದೆ. |
| 11 | 36 | ಇತರೇ ಶರಾ ಹಾಗೂ ಬಾಬ್ತುಗಳು :<br>1) ಸಂಸ್ಥೆಯ ಲೆಕ್ಕ ಪತ್ರಗಳನ್ನು ಶ್ರೀ ಎಮ್.ಆರ್.ಪಾಟೀಲ ಲೆಕ್ಕಿಗರು ಇವರು ಶ್ರೀ ಬಾಳೇಶ ಸಂಗೊಳ್ಳಿ (ಗಣಕಯಂತ್ರ ಆಪರೇಟರರು)ಇವರ ನೆರವಿನೊಂದಿಗೆ ನಿರ್ವಹಿಸಿರುತ್ತಾರೆ. ಹಾಗೂ ಶಾಖೆಗಳ ಲೆಕ್ಕ ಪತ್ರಗಳನ್ನು ಆಯಾ ಶಾಖೆಗಳ ಪ್ರಮುಖರು ನಿರ್ವಹಿಸಿರುತ್ತಾರೆ.ಕೇಂದ್ರ ಕಚೇರಿಯ ಲೆಕ್ಕ ಪತ್ರಗಳನ್ನು ಗಣಕೀಕೃತಗೊಳಿಸಲಾಗಿದ್ದು, ಗಣಕೀಕೃತ ಲೆಕ್ಕ ಪತ್ರಗಳನ್ನು ಪರಿಗಣಿಸಿ ಲೆಕ್ಕ ಪರಿಶೋಧನೆ ಪೂರೈಸಲಾಗಿದೆ. ಶಾಖೆಗಳ ಲೆಕ್ಕ ಪತ್ರಗಳನ್ನು ಕೈ ಬರಹದಲ್ಲಿ ನಿರ್ವಹಿಸಲಾಗಿದ್ದು, ಕಾಲ ಕಾಲಕ್ಕೆ ಕೇಂದ್ರ ಕಚೇರಿಯ ಗಣಕಯಂತ್ರದಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಶಾಖೆಗಳ ಲೆಕ್ಕ ಪತ್ರ ಬರೆಯುವಲ್ಲಿ ಆಗಾಗ ವಿಳಂಬ ನೀತಿ ಅಳವಡಿಸಿರುವದು, ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಲೆಕ್ಕ ಪತ್ರ ಬರೆಯುವ ರೂಢಿ ಇರುವದು ಕಂಡು ಬರುತ್ತದೆ. ಹೀಗಾಗಿ ಕೇಂದ್ರ ಕಚೇರಿಯಲ್ಲಿ ಕ್ರೋಢೀಕರಣ ಮಾಡಿಕೊಳ್ಳುವಲ್ಲಿ ಲೋಪಗಳು ಉಂಟಾಗಿರುವುದನ್ನೂ ಸಹ ಗಮನಿಸಿದೆ. ಮತ್ತು ಕೇಂದ್ರ ಕಚೇರಿಯಲ್ಲಿ ವರ್ಷಾಂತ್ಯಕ್ಕೆ ಬಹಳಷ್ಟು ಸಲ ಶಾಖೆಗಳ ಲೆಕ್ಕ ಪತ್ರಗಳನ್ನು ಎಡಿಟ್ ಮಾಡುವದು, ಬದಲಾವಣೆ ಮಾಡುತ್ತಿರುವುದು ಕಂಡು ಬರುತ್ತದೆ. ಅದೇರೀತಿ ನಿಖರ ವಿವರಗಳಿಲ್ಲದೇ ಬಾಡಿಗೆ ಹಮಾಲಿ, ದಿನಗೂಲಿ ಇತ್ಯಾದಿಗಳನ್ನು ವರ್ಷಾಂತ್ಯಕ್ಕೆ ಖರ್ಚು ಹಾಕುತ್ತಿರುವುದು ಸಹ ಸರಿಯಲ್ಲ. ಸಂಘದ ಕೆಲಸ ಕಾರ್ಯಗಳಿಗೆ ತಗಲುವ ದಿನಗೂಲಿ ನೌಕರರು, ಹಮಾಲರು ಇತ್ಯಾದಿಗಳ ನಿಖರ ಯೋಜನೆ ತಯಾರಿಸಿ, ಆಯಾ ತಿಂಗಳಲ್ಲೇ ಖರ್ಚುಗಳನ್ನು ನಿರ್ವಹಿಸುವುದು ಸರಿಯಾದ ಪದ್ಧತಿಯಾಗುತ್ತದೆ. ಲೆಕ್ಕ ಪತ್ರಗಳನ್ನು ಆರ್ಥಿಕ ವರ್ಷ ಮುಗಿದ ನಂತರ ಮುಂಬರುವ ಒಂದು ತಿಂಗಳಲ್ಲಿ ಅಂತಿಮಗೊಳಿಸಿ ಸಾಫ್ಟವೇರ ಲಾಕ್ ಮಾಡುವದು ಅಗತ್ಯವಿದೆ. ಶಾಖೆಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ಕಾಳಜಿ ತೆಗೆದುಕೊಳ್ಳುವುದು ಮತ್ತು ಪರಿಣಾಮಕಾರಿ ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿ ಆಂತರಿಕ ಲೆಕ್ಕ |

Deputy Registrar of Co-operative Societies
Belagavi
ಬೆಳಗಾವಿ



Scanned with CamScanner

| | | |
|---|---|---|
| | | ಪರಿಶೋಧನೆ ಮಾಡುವುದು ಅಗತ್ಯವಿದೆ ಎಂದು ಅಭಿಪ್ರಾಯ ಪಡಲಾ. |

ಮೇಲ್ಕಾಣಿಸಿದ ನೂನ್ಯತೆಗಳನ್ನು ಸರಿಪಡಿಸಿಕೊಂಡು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ನಿಯಮಗಳು 1960 ರನ್ವಯ ಅವಶ್ಯ ಕ್ರಮಗಳನ್ನು ನಿಯಮಾನುಸಾರ ತೆಗೆದುಕೊಂಡು 45 ದಿನಗಳ ಒಳಗಾಗಿ ಈ ಕಛೇರಿಗೆ ಅನುಪಾಲನಾ ವರದಿಯನ್ನು ಈ ಕೆಳಕಂಡ ನಮೂನೆಯಲ್ಲಿ ಸೂಕ್ತ ದಾಖಲಾತಿಗಳನ್ನು ಲಗತ್ತಿಟ್ಟು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸಂಘದ ಕಾರ್ಯದರ್ಶಿ ಹಾಗೂ ಆಡಳಿತ ಮಂಡಲಿ ಸದಸ್ಯರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು ತಿಳಿಯಿರಿ.

| ಕ್ರಮ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನ್ಯತೆಯ ಸಂಕ್ಷಿಪ್ತ ವಿವರ | ಸಂಘದಿಂದತೆಗೆದುಕೊಂಡಕ್ರಮದ ವಿವರ |
|---|---|---|---|
| | | | |

ಈ ಆದೇಶವನ್ನು ಇಂದು ದಿನಾಂಕ:27/01/2025 ರಂದು ನನ್ನ ಸಹಿ ಹಾಗೂ ಕಾರ್ಯಾಲಯದ ಮುದ್ರೆಯೊಂದಿಗೆ ಹೊರಡಿಸಿದೆ.

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ Deputy Registrar of Co-operative Societies, Belagavi ಬೆಳಗಾವಿ

-ಸಹಿ-
ಸಹಕಾರ ಸಂಘಗಳ ಉಪ ನಿಬಂಧಕರು,
ಬೆಳಗಾವಿ ಜಿಲ್ಲೆ, ಬೆಳಗಾವಿ.

ಗೆ,
ಮುಖ್ಯಕಾರ್ಯನಿರ್ವಹಣಾಧಿಕಾರಿ/ಅಧ್ಯಕ್ಷರು
ದಿ. ಖಾನಾಪೂರ ತಾಲೂಕಾ ವ್ಯವಸಾಯೋತ್ಪನ್ನ ಮಾರಾಟ
ಸಹಕಾರ ಸಂಘ ನಿ, ನಂದಗಡ.
ತಾ:ಖಾನಾಪೂರ ಜಿ:ಬೆಳಗಾವಿ.

1] ಪ್ರತಿ ಗೌರವಪೂರ್ವಕವಾಗಿ ಮಾನ್ಯ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಳಗಾವಿ ಪ್ರಾಂತ, ಬೆಳಗಾವಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2] ಪ್ರತಿ ಗೌರವಪೂರ್ವಕವಾಗಿ ಮಾನ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರು, ಬೆಳಗಾವಿ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

3] ಪ್ರತಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ
ಬೆಳಗಾವಿ ಜಿಲ್ಲೆ ಬೆಳಗಾವಿ
03/02/25

ಸಹಕಾರ ಸಂಘಗಳ ಉಪ ನಿಬಂಧಕರು,
ಬೆಳಗಾವಿ ಜಿಲ್ಲೆ, ಬೆಳಗಾವಿ.

o/c 27/1/25



Scanned with CamScanner